ದಿನಾಂಕಃ **25.04.2026.**
**ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.**
**ಪಿ.ಡಬ್ಲ್ಯೂ . 1**

**ಅರ್ಜಿದಾರ ಪರ ವಕೀಲರು ಸಲ್ಲಿಸಿದ ಸಿವಿಲ್ ಪ್ರಕ್ರಿಯ ಸಂಹಿತೆ ಕಲಂ ನಂ 151 ಹಾಗೂ ಆಜ್ಞೆ 18 ನಿಯಮ 17 ಅರ್ಜಿಗಳನ್ನು ಪುರಸ್ಕರಿಸಿರುವುದರಿಂದ ಸಾಕ್ಷಿಗೆ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಿಂದಃ</u>**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ನಿಜವಾಗಿರುತ್ತವೆ.

ನಮ್ಮ ತಾಯಿ ಮನೆತನದ ಮೂಲ ಪುರುಷ ಮುದಿಗೆರೆ ಇವರ ಮನೆತನಕ್ಕೆ ಸಂಬಂಧಪಟ್ಟಂತ ವಂಶ ವೃಕ್ಷ ಹಾಜರುಪಡಿಸಿದ್ದು ಅದನ್ನು **ನಿಪಿ 11 ಎಂದು,** ನನ್ನ ಅಜ್ಜಿಗೆ ನಿಂಗಿ ಅಲಿಯಾಸ್ ನಿಂಗಮ್ಮ ಅಲಿಯಾಸ್ ಲಿಂಗಮ್ಮ ಕೋಂ ನಡಿಕೇರಯ್ಯ ಅಲಿಯಾಸ್ ಗುಡ್ಡಯ್ಯ ಅಂತ ಕರೆಯುತ್ತಿದ್ದರ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸಿದ್ದು **ನಿಪಿ 12 ಎಂದು,** ನನ್ನ ಮುತ್ತಾತ ಮುದಿಗೆರೆ ಇವರ ಹೆಸರಿನಲ್ಲಿ ಸ.ನಂ. 14/2, ಅಟ್ಲಾಸ್, ಸರ್ವೆ ಟಿಪ್ಪಣಿ 1 ರಿಂದ 4 ದಾಖಲೆ ಹಾಜರುಪಡಿಸಿದ್ದು **ನಿಪಿ 13 ಎಂದು,** ಲಿಂಗಮ್ಮ ಇವರು ಮುದಿಗೆರೆ ಮೊಮ್ಮಗಳು ಹಾಗೂ ಗೌರಮ್ಮ ಮುದಿಗೆರೆ ಮಗ ಈತನ ಹೆಂಡತಿ ಅಂತ ಇರುತ್ತದೆ ಎಂದು ಸದರಿಯವರ ಹೆಸರಿನಲ್ಲಿ ಸ. ನಂ. 14/2 ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದು **ನಿಪಿ 14 ಎಂದು,** ಲಿಂಗಮ್ಮ ಇವರು ಮುದಿಗೆರೆ ಮೊಮ್ಮಗಳು ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದು **ನಿಪಿ 15 ಎಂದು,** ಮುದಿಗೆರೆ, ಗೌರಮ್ಮ, ಲಿಂಗಮ್ಮ ಇವರುಗಳ ಹೆಸರಿನಲ್ಲಿ ಸ. ನಂ .14/2 ಮುಂದುವರೆದಿದ್ದರ ಬಗ್ಗೆ ಮೂರು ದಾಖಲೆ ಹಾಜರುಪಡಿಸಿದ್ದು ಅದನ್ನು **ನಿಪಿ 16 ಎಂದು,** ಸ.ನಂ.20/1 ಇದು ರಂಗ ಬಿನ್ ಮುದಿಗೆರೆ ಇವರ ಹೆಸರಿನಲ್ಲಿದ್ದ ಬಗ್ಗೆ ಎರಡು ದಾಖಲೆ ಹಾಜರುಪಡಿಸಿದ್ದು ಅದನ್ನು **ನಿಪಿ 17 ಮತ್ತು ನಿಪಿ 18 ಎಂದು,** ಹಾಗೂ ಲಿಂಗಮ್ಮ ಮುದಿಗೆರೆ ಇವರ ಹೆಸರಿನಲ್ಲಿ ಖಾತೆ ಮುಂದುವರೆದಿದ್ದರ ಬಗ್ಗೆ ಮೂರು ದಾಖಲೆ ಹಾಜರುಪಡಿಸಿದ್ದು ಅದನ್ನು **ನಿಪಿ 19 ರಿಂದ ನಿಪಿ 21 ಎಂದು,** ಸ. ನಂ. 21/4 ಗೌರಮ್ಮ ಕೋಂ ರಂಗ ಇವರ ಹೆಸರು ಮುಂದುವರೆದಿದ್ದರ ಬಗ್ಗೆ ಮೂರು ದಾಖಲೆ ಹಾಜರುಪಡಿಸಿದ್ದು ಅದನ್ನು

**ನಿಪಿ 22 ರಿಂದ ನಿಪಿ 24 ಎಂದು,** ಸದರಿ ಸರ್ವೆ ನಂಬರ್ ರಂಗ ಬಿನ್ ಮುದಿಗೆರೆ ಇವರ ಹೆಸರಿನಲ್ಲಿ ಮುಂದುವರೆದಿದ್ದರ ಬಗ್ಗೆ ಎರಡು ದಾಖಲೆ ಹಾಜರುಪಡಿಸಿದ್ದು ಅದನ್ನು **ನಿಪಿ 25 ಮತ್ತು ನಿಪಿ 26 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ ಏನು ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

**(ಎಂ.ಹೆಚ್. ಅಣ್ಣಯ್ಯನವರ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**